ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಬುಧವಾರ, ೨೯, ಏಪ್ರಿಲ್, ೨೦೨೬ (ವೈಶಾಖ, ೦೯, ಶಕವರ್ಷ, ೧೯೪೮)	ಸಂಚಿಕೆ ೭೯
Volume - 161	BENGALURU, WEDNESDAY, 29, APRIL, 2026 (VAISHAKHA , 09, SHAKAVARSHA, 1948)	Issue 79

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಗ್ರೂಪ್-ಬಿ ವೃಂದದ ಜಾನುವಾರು ಅಭಿವೃದ್ಧಿ ಅಧಿಕಾರಿಗಳ ಹುದ್ದೆಯನ್ನು ಪತ್ರಾಂಕಿತ ಗ್ರೂಪ್-ಬಿ ಹುದ್ದೆಯೆಂದು ಪರಿಗಣಿಸುವ ಕುರಿತು.

ಓದಲಾಗಿದೆ:
1. ಆಯುಕ್ತಾಲಯದ ಏಕ ಕಡತ ಸಂಖ್ಯೆ:CAHVS-ADM0DAJ/17/2022-ADMNCAH-COMM AHVS.
2. ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 56 ಪಸಸೇ 2011, ದಿನಾಂಕ:29.12.2012.
3. ಸರ್ಕಾರದ ಅಧಿಸೂಚನೆ ಸಂಖ್ಯೆ:DPAR 27 SDE 2018, ದಿನಾಂಕ:08.04.2019.
4. *ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 80 ಸೇಇವಿ 2024, ದಿನಾಂಕ:26.03.2025.*

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ:(1) ರ ಆಯುಕ್ತಾಲಯದ ಏಕ ಕಡತದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್-ಬಿ ವೃಂದದ 227 ಜಾನುವಾರು ಅಭಿವೃದ್ಧಿ ಅಧಿಕಾರಿಗಳನ್ನು ಪತ್ರಾಂಕಿತ ಗ್ರೂಪ್-ಬಿ ಹುದ್ದೆಯೆಂದು ಪರಿಗಣಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(2) ರ ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ಇಲಾಖಾ ಪುನರ್ ರಚನೆ ಆದೇಶದಲ್ಲಿ ಜಾನುವಾರು ಅಧಿಕಾರಿ ವೃಂದದ 150 ಹುದ್ದೆಗಳನ್ನು ವೇತನ ಶ್ರೇಣಿ ರೂ.21600-40050 (ಗ್ರೂಪ್-ಬಿ ವರ್ಗ) ದಲ್ಲಿ ಜಾನುವಾರು ಅಭಿವೃದ್ಧಿ ಅಧಿಕಾರಿ ಹೊಸ ವೃಂದವನ್ನು ಸೃಜಿಲಾಗಿದ್ದು, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಜಾನುವಾರು ಅಭಿವೃದ್ಧಿ ಅಧಿಕಾರಿ ವೃಂದದಲ್ಲಿ ಒಟ್ಟು-227 ಹುದ್ದೆಗಳಿರುತ್ತವೆ.

ಮೇಲೆ ಓದಲಾದ ಕ್ರಮ ಸಂಖ್ಯೆ:(3) ರ ಆದೇಶದಲ್ಲಿ ವೇತನ ಶ್ರೇಣಿ ರೂ.40900 ರಿಂದ 78200 ಮತ್ತು ಮೇಲ್ಪಟ್ಟು ಆದರೆ, ವೇತನ ಶ್ರೇಣಿ ರೂ.52650 ರಿಂದ 97100ರವರೆಗಿನ ಕೆಳಗಿನ ವೇತನ ಶ್ರೇಣಿಗಳು ಗ್ರೂಪ್-ಬಿ ಎಂದು ವರ್ಗೀಕರಿಸಿ ಆದೇಶಿಸಲಾಗಿರುತ್ತದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಮೇಲೆ ಓದಲಾದ ಕ್ರಮ ಸಂಖ್ಯೆ:(4) ರ ಆದೇಶದಲ್ಲಿ ವೇತನ ಶ್ರೇಣಿ *ರೂ.65950-1650-74200-1900-85600-2300-99400-2700-115600-3100-124900ರ ಮತ್ತು ಅದಕ್ಕೂ ಮೇಲ್ಪಟ್ಟ ವೇತನ ಶ್ರೇಣಿಗಳನ್ನು ಆದರೆ,ರೂ.83700-1900-85600-2300-99400-2700-115600-3100-134200- 3500-155200 ಕ್ಕಿಂತ ಕೆಳಗಿನ ವೇತನ ಶ್ರೇಣಿ ಹೊಂದಿರುವ ಹುದ್ದೆಗಳನ್ನು ಸಮೂಹ "ಬಿ" ಹುದ್ದೆಗಳೆಂದು ಗುರುತಿಸಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದಂತೆ* ಗ್ರೂಪ್-ಬಿ ವೃಂದದ ವೇತನ ಶ್ರೇಣಿ ಹಾಗೂ ಪ್ರಸ್ತುತ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಗ್ರೂಪ್-ಬಿ ವೃಂದದ ಜಾನುವಾರು ಅಭಿವೃದ್ಧಿ ಅಧಿಕಾರಿಗಳ ಹುದ್ದೆಯ 2022ರ ಪರಿಷ್ಕೃತ ವೇತನ ಶ್ರೇಣಿ ರೂ.65950-124900 ಒಂದೇ ವೇತನ ಶ್ರೇಣಿಯಾಗಿರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಪಸಂಎ 13 ಪಅವಿ 2021 ಬೆಂಗಳೂರು,
ದಿನಾಂಕ:23 .04.2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಯ ವೇತನ ಶ್ರೇಣಿಯು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 80 ಸೇಇವಿ 2024, ದಿನಾಂಕ:26.03.2025ರಲ್ಲಿ ಪ್ರಸ್ತಾಪಿಸಿರುವ "ಬಿ" ಸಮೂಹ ಅಧಿಕಾರಿಗಳ ವೇತನ ಶ್ರೇಣಿಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಜಾನುವಾರು ಅಭಿವೃದ್ಧಿ ಅಧಿಕಾರಿ ವೃಂದದ 227 ಅಧಿಕಾರಿ ಹುದ್ದೆಗಳನ್ನು ಯಾವುದೇ ಹೆಚ್ಚುವರಿ ಆರ್ಥಿಕ ಸೌಲಭ್ಯಗಳನ್ನು ಕೋರದೆ ಇರುವ ಷರತ್ತಿಗೊಳಪಟ್ಟು ಪತ್ರಾಂಕಿತ ಗ್ರೂಪ್-ಬಿ ಹುದ್ದೆ ಎಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/394/ವೆಚ್ಚ-4/2025, ದಿನಾಂಕ:18-09-2025 ಮತ್ತು ಸಿ.ಆ.ಸು.ಇಲಾಖೆ (ಸೇವಾ ನಿಯಮಗಳು)ಯ ಟಿಪ್ಪಣಿ ಸಂಖ್ಯೆ: ಸಿಆಸುಇ 84 ಸೇಇವಿ 2025, ದಿನಾಂಕ:09-04-2026 ಗಳಂದು ನೀಡಿರುವ ಅಭಿಪ್ರಾಯದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ. ಚಂದ್ರಕಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ)

PR-162

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH